■ ಕೆ.ಆರ್. ಉಮಾದೇವಿ ಉರಾಳ
ಕಲೆ: ಸಂತೋಷ್ ಸಸಿಹಿತ್ಲು



# ಒಳಗಣ್ಣೋಟದ ಚಿತ್ತಾರ

ಹದಿಹರೆಯದ ತುದಿಯಂಚಿನಲ್ಲಿದ್ದ, ಅದೇ ವರ್ಷ ಪದವೀಧರೆಯಾಗಿದ್ದ ಆ ಯುವತಿಗೆ ಸದಾ ಮನದಲ್ಲಿ ಒಂದೇ ತುಡಿತ. ತಮ್ಮೂರಿನ ಪ್ರೌಢಶಾಲೆಗೆ ಇಂಗ್ಲಿಷ್ ಬೋಧಿಸುವ ಶಿಕ್ಷಕರ ಕೊರತೆಯಿದೆಯಂತೆ. ಹಾಗೆಂದು ತಂದೆಗೆ ಸ್ನೇಹಿತರಾದ ಶಾಲಾ ಶಿಕ್ಷಕರಿಂದ ತಿಳಿದುಬಂದಿದೆ. ತಾನು ಪದವೀಧರೆಯಾಗಿ ಮನೆಯಲ್ಲಿ ಸುಮ್ಮನೆ ಇದ್ದೇನೆಂದು ಯಾವುದಾದರೂ ಕ್ಲಾಸ್‌ಗೆ ಪಾಠ ಮಾಡಲು ಶಾಲೆಯ ಶಿಕ್ಷಕರು ಯಾರಾದರೂ ಕೇಳಿದರೆ? ತನ್ನೂರು, ತಾನು ಓದಿದ ಶಾಲೆ, ಇಲ್ಲವೆನ್ನಲಾದೀತೇ? ಇಂಗ್ಲಿಷ್ ಪಾಠ ಮಾಡುವುದೇನು ಅಷ್ಟು ಸುಲಭವೇ? ಆಕೆ ಮನೆಯಲ್ಲಿದ್ದ ಗ್ರಾಮರ್ ಪುಸ್ತಕಗಳನ್ನೆಲ್ಲ ಒಟ್ಟುಹಾಕಿ ಬಿಡದೆ ಓದಿಯೇ ಓದಿದಳು.

ಸಾಹಿತ್ಯಾಸಕ್ತೆ ತಾನು ಪದವಿ ತರಗತಿಗಳಲ್ಲೂ ಪಠ್ಯೇತರ ಓದಿನಲ್ಲೇ ಮುಳುಗಿರುತ್ತಿದ್ದವಳು. ತಾನು ಬೋರ್ಡ್ ಮೇಲೆ ಬರೆದರೆ ಅದು ಆಕರ್ಷಕವಾದ ಮಾದರಿ ಬರಹವಾಗಬೇಕು. ತನ್ನ ಅಕ್ಷರಗಳೋ ಅಂದಚಂದದಿಂದ ಗಾವುದ ದೂರ. ಸರಿ, ಕಾಪಿ ಪುಸ್ತಕ ಕೊಂಡುತಂದು ದಿನಾ ಕಾಪಿ ಬರೆದಳು. ಸೋಷಿಯಲ್ ಸ್ಟಡೀಸ್ ಪಾಠ ಮಾಡಬೇಕಾಗಿ ಬಂದರೆ? ಮನೆಯಲ್ಲಿದ್ದ ಹಳೆಯ ಭೂಗೋಳ, ಇತಿಹಾಸ ಪಠ್ಯಪುಸ್ತಕಗಳ ನಿರಂತರ ಅಧ್ಯಯನ ಸಾಗಿತು. ತನ್ನದೇ ಆಸಕ್ತಿಗಾಗಿ ಹಿಂದಿ ಭಾಷಾಭ್ಯಾಸವನ್ನೂ ಮಾಡಿದಳು. ಅಧ್ಯಾಪಕ ವೃತ್ತಿಗಾಗಿ ಎದುರಿಸಿದ್ದ ಸಂದರ್ಶನಗಳಲ್ಲಿ ಕೊನೆಯದಾದ ಕೆಪಿಎಸ್‌ಸಿ ಸಂದರ್ಶನ ಅತ್ಯಂತ ಯಶಸ್ವಿಯಾಗಿತ್ತು.

ತನಗೆ ಹೃದ್ಗತವಾಗಿದ್ದ ಕಗ್ಗದ ಕುರಿತು, ಆಗಲೇ ಎರಡು ಬಾರಿ ಓದಿ ಮುಗಿಸಿದ್ದ 'ಶ್ರೀ ರಾಮಾಯಣ ದರ್ಶನಂ' ಕುರಿತು ಪುಟ್ಟ ಭಾಷಣಗಳನ್ನೇ ಮಾಡುವ ಅವಕಾಶ ಈಕೆಗೆ ದೊರೆತಿದ್ದು, ತಾನು ನೂರುಶತ ವಿಜೇತೆಯಾಗಿದ್ದೇನೆ ಎಂದು ಅವಳ ಆತ್ಮ ಸಾರಿ ಹೇಳುತ್ತಿದ್ದಂತೆಯೇ, ವೃತ್ತಿಯ ಆದೇಶ ಪತ್ರವೂ ಕೈಸೇರಿತ್ತು. ಆಕೆ ಕಂಡ ಕನಸು ನನಸಾಗಿತ್ತು.

'ಆ ಯುವತಿ' ಎಂದು ಅನಾಮಧೇಯವಾಗಿಸಿ ಹೇಳುತ್ತಿರುವುದು ಮತ್ಯಾರಿಗಲ್ಲ, ಓದುಗರೆ.